**ಓ.ಎಸ್ ನಂ. 82/2020 ಪಿ.ಡಬ್ಲ್ಯೂ-1 (ರಾಜು)**

**ಸಾಕ್ಷಿಯನ್ನು ದಿನಾಂಕಃ 18.09.2025 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 2 ರವರ ಪರ ವಕೀಲರಾದ ಶ್ರೀ ಎನ್ ಹೆಚ್ ಎಂ ವಕೀಲರಿಂದಃ**

ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನಾನು ವಾರ್ಷಿಕವಾಗಿ ನನ್ನ ಆದಾಯ ರೂ.3 ಲಕ್ಷ ಇರುತ್ತದೆ. ನನಗೆ ದಾವಾಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದು ಹೇಳಲಾದ ಕ್ರಯಪತ್ರದ ಕ್ರಯದಾರರಾದ ಶ್ರೀ ಅರುಣ್ ಗೌಡ ರವರು ಎಷ್ಟು ವರ್ಷದಿಂದ ಪರಿಚಯ ಇರುತ್ತಾರೆ ಎಂದರೆ ಸಾಕ್ಷಿಯು ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಪರಿಚಯ ಇರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ 2 ರ ದಾನ ಪತ್ರದಲ್ಲಿ ದಾವಾಸ್ತಿಯ ಖಾತಾ ಸಂಖ್ಯೆ 409 ರ ಬಗ್ಗೆ ಎಲ್ಲಿಯೂ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ 2 ರ ದಾನಪತ್ರವನ್ನು ತೋರಿಸಿ ಇದರಲ್ಲಿ ಖಾತಾ ಸಂಖ್ಯೆ 409 ಎಂದು ಬರೆಯಲಾಗಿರುತ್ತದೆಯೇ ಎಂದರೆ ಸಾಕ್ಷಿಯ ಸದರಿ ದಾನಪತ್ರವನ್ನು ಓದಿ ನೋಡಿ ಸದರಿ ದಾನಪತ್ರವನ್ನು ಬರೆಯಲಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ನಿಪಿ 3 ರಂತೆ ಯಾವ ದಾಖಲೆಯ ಆಧಾರದ ಮೇಲೆ ಬದಲಾವಣೆಯಾಗಿದೆ ಎಂದರೆ ಸಾಕ್ಷಿಯು ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ